# ರಂಗೋಲಿಯ ಒಳಹೊರಗೆ

ಗಿಡಮರಗಳಲ್ಲಿ ಹೂಗಳು ಅರಳುತ್ತವೆ. ಮನೆಯಂಗಳದಲ್ಲೂ ಹೂವು ಅರಳುತ್ತವೆ. ಅಂಗಳಕ್ಕೆ ಚಪ್ಪರವಾದ ಮಲ್ಲಿಗೆ ಚೆಲುವೆಯ ಅಥವಾ ಕುಂಡದಲ್ಲಿನ ಗುಲಾಬಿ ಬೆಡಗಿಯ ಮೈಯಲ್ಲಿ ಮೂಡುವ ಹೂಗಳಲ್ಲ ಇವು. ರಂಗೋಲಿ ಎಂದು ಈ ಹೂಗಳ ಹೆಸರು. ಗಿಡಮರಗಳಲ್ಲಿ ಹೂ ನಗುವುದು ಪ್ರಕೃತಿಯ ಲೆಕ್ಕಾಚಾರ. ಮನೆಯಂಗಳದಲ್ಲಿ ಹೂ ಪಲ್ಲವಿಸುವುದು ಮನೆಯೊಡತಿಯರ ಚಮತ್ಕಾರ.

ರಂಗೋಲಿ ಎನ್ನುವುದು ಮುಂಜಾನೆ ಇಲ್ಲವೇ ಸಂಜೆಯ ಹೊಂಬಣ್ಣದಲ್ಲಿ ಮನೆಯಂಗಳದಲ್ಲಿ ಅರಳುವ ಒಂದು ಚಿತ್ತಾರ. ಈ ಚಿತ್ತಾರಗಳನ್ನು ಬಿಡಿಸುವವರು ಕಲಾಶಾಲೆಗಳಲ್ಲಿ ಕಲಿತ ಜಾಣೆಯರಲ್ಲ. ರಂಗೋಲಿ ಬಿಡಿಸಲಿಕ್ಕೆ ಶಾಲೆಯ ಮೆಟ್ಟಿಲು ತುಳಿದು ಗಣಿತ ಕಲಿಯುವ ಅನಿವಾರ್ಯತೆಯೂ ಇಲ್ಲ. ರಂಗೋಲಿ ರೂಪದಲ್ಲಿ ಹೆಣ್ಣುಮಕ್ಕಳು ಬಿಡಿಸುವ ಗೆರೆಗಳ ಮರೆಯಲ್ಲಿ ಸುಲಭಕ್ಕೆ ಬಿಡಿಸಲಾಗದ ‘ಬದುಕಿನ ಗಣಿತ’ವೇ ಅಡಗಿರುವಂತಿದೆ. ಗೃಹಿಣಿಯರ ಗಣಿತದೆದುರು ರೇಖಾಗಣಿತ ಬಹು ಸರಳವೆನ್ನಬೇಕು. ಅದು ಬರಿಯ ರಂಗೋಲಿಯೇ? ‘ಕೋನ ರೇಖೆಗಳೇನು! ಚೌಕ ವೃತ್ತಗಳೇನು! / ಸ್ವಸ್ತಿಕ, ಮಂಡಲ, ಚುಕ್ಕೆ; / ಯಾವುದೋ ಆರ್ಷ ಮಂತ್ರಕ್ಕೆ / ಒಡಮೂಡಿದೆ ಕಲೆಗಾರಿಕೆಯ ರೆಕ್ಕೆ’ (‘ರಂಗೋಲಿ ಮತ್ತು ಮಗ’, ಕೆ.ಎಸ್. ನಿಸಾರ್ ಅಹಮದ್.)

ರಂಗೋಲಿ ಹೆಣ್ಣುಮಕ್ಕಳೊಂದಿಗೆ ತಳಕು ಹಾಕಿಕೊಂಡಿರುವ ಒಂದು ವಿಶಿಷ್ಟ ಕಲೆ. ಗಂಡಸರೂ ರಂಗೋಲಿ ಬಿಡಿಸಬಹುದು. ಆದರೆ, ರಂಗೋಲಿಗೆ ಜೀವ ತುಂಬಬೇಕಾದ ಭಾವಕೋಶವೊಂದು ಗಂಡಿನ ಬೆರಳುಗಳಿಗೆ ಹೇಗೆ ದಕ್ಕಬೇಕು? ಅಂಗಳದಲ್ಲಿನ ರಂಗೋಲಿ ಬರಿಯ ಚಿತ್ತಾರವಷ್ಟೇ ಅಲ್ಲ. ಆ ಚಿತ್ತಾರ ಗೃಹ ಕಲಾವಿದೆಯ ಮನಸ್ಸಿನ ಭಾವಗಳ ಅನಾವರಣ. ಪ್ರತಿ ರಂಗೋಲಿಯ ಹಿಂದೆಯೂ ಒಂದೊಂದು ಅಪ್ರತಿಮ ಮನೋಲೋಕ. ಅಂಗಳಕ್ಕೆ ಸಿಂಗಾರವಾದ ರಂಗೋಲಿಯ ಒಪ್ಪ ಓರಣದಲ್ಲಿ ಹೆಣ್ಣಿನ ಆ ದಿನದ ಮನಸ್ಥಿತಿ ಇಣುಕುತ್ತಿರುತ್ತದೆ. ಮನಸ್ಸಿನ ಅವ್ಯಕ್ತ ಭಾವಗಳೇ ಚುಕ್ಕಿ ಮತ್ತು ಗೆರೆಗಳ ರೂಪದಲ್ಲಿ ಬೆಸೆದುಕೊಂಡಿರುತ್ತವೆ.

ಅಗುಳಿನ ಮೇಲೆ ಅನ್ನದ ಪರೀಕ್ಷೆ ಎನ್ನುವಂತೆ ರಂಗೋಲಿಯ ಮೇಲೆ ಸಾಂಸಾರಿಕ ಸ್ವಾಸ್ಥ್ಯದ ಪರೀಕ್ಷೆ ನಡೆಸಬಹುದಾದ ದಿನಗಳಿದ್ದವು. ರಂಗೋಲಿಯ ಚೆಲುವು ಗೃಹಕೃತ್ಯದ ಮೇಲೆ ಮನೆಯೊಡತಿ ಸಾಧಿಸಿರಬಹುದಾದ ಹಿಡಿತಕ್ಕೆ ರುಜುವಾತಷ್ಟೆ. ಅಂಗಳದಲ್ಲಿ ರಂಗೋಲಿ ಇಲ್ಲದಿದ್ದರೆ ಮನೆಯೊಳಗೆ ಮನೆಯೊಡತಿಯಿಲ್ಲ ಎನ್ನುವುದು ಜಗಜ್ಜಾಹೀರು.

ರಂಗೋಲಿ ಬಿಡಿಸುವುದರಲ್ಲಿ ಹೆಣ್ಣುಮಕ್ಕಳ ನಡುವೆ ಅಘೋಷಿತ ಸ್ಪರ್ಧೆ ನಡೆಯುತ್ತಿತ್ತು. ಆ ಸ್ಪರ್ಧೆ ಹಬ್ಬಗಳ ಸಂದರ್ಭದಲ್ಲಿ ಮತ್ತಷ್ಟು ಕಳೆಗಟ್ಟುತ್ತಿತ್ತು. ರಂಗೋಲಿಗಳನ್ನು ಬಣ್ಣಗಳಲ್ಲಿ ಮುಳುಗಿಸುವುದು ಇತ್ತೀಚಿನ ಕ್ರಮ. ಹಬ್ಬ ಜಾತ್ರೆಗಳಂಥ ವಿಶೇಷ ಸಂದರ್ಭಗಳಲ್ಲಿ ಅರಿಶಿನ ಕುಂಕುಮದ ಜೊತೆಗೆ ಕೆಮ್ಮಣ್ಣು ಉರುಮಂಜು ಹೂ ಪಕಳೆಗಳೂ ಸೇರಿಕೊಂಡು ರಂಗೋಲಿ ವರ್ಣಮಯಗೊಳ್ಳುತ್ತಿತ್ತು. ಉಳಿದಂತೆ ರಂಗೋಲಿಯಲ್ಲಿ ಬಿಳಿಯೇ ಪ್ರಧಾನ.

ಚಿತ್ರ ಬಿಡಿಸಲು ಕಲಾವಿದನೊಬ್ಬ ಕ್ಯಾನ್ವಾಸ್ ಸಿದ್ಧಪಡಿಸಿಕೊಳ್ಳುವಂತೆ, ಗೃಹಕಲಾವಿದೆ ರಂಗೋಲಿ ಬಿಡಿಸುವ ಮುನ್ನ ಅಂಗಳವನ್ನು ಸಜ್ಜುಪಡಿಸಿಕೊಳ್ಳುತ್ತಾಳೆ. ಸಾರಣೆಗೊಂಡ ನೆಲವೇ ರಂಗೋಲಿಕಾರಿಣಿಗೆ ಕ್ಯಾನ್ವಾಸ್. ಸಗಣಿಯಿಂದ ಅಂಗಳದ ಸಾರಣೆಯಲ್ಲೂ ಒಂದು ಕ್ರಮವಿದೆ. ನಸುಬಂಗಾರ ಬಣ್ಣದ ಸಗಣಿಯನ್ನು ಆರಿಸಿಕೊಳ್ಳುವುದರಲ್ಲಿ, ಸಗಣಿನೀರು ಮಂದವೋ ತಿಳಿಯೋ ಆಗದಿರುವ ಪರಿಣತಿಯಲ್ಲಿ, ಬಕೀಟು ಅಥವಾ ದಬರಿಗೆಯಲ್ಲಿನ ನೀರನ್ನು ನೆಲಕ್ಕೆ ಬಡಿಯುವ ಲಯದಲ್ಲಿ, ನೆಲ ಸಾರಣೆಗೊಳ್ಳುವ ಕ್ಷಣಗಳಲ್ಲಿ ಮೂಡುವ ಸಪ್ಪಳದಲ್ಲಿ ಸಾರಣೆಯ ಹದ ಕಾಣಿಸುತ್ತದೆ. ಕದುರುಗೊಂಡ ನೆಲದ ಹೊಳಪನ್ನು ಸೂರ್ಯನ ಕದಿರು ಇಮ್ಮಡಿಸಿದ ನಂತರವೇ ಚುಕ್ಕಿ ಗೆರೆಗಳ ಯುಗಳದಲ್ಲಿ ರಂಗೋಲಿ ಅರಳುವುದು.

ಮನೆಯಂಗಳದಲ್ಲಿನ ಚಿತ್ತಾರವನ್ನು ರಂಗೋಲಿ ಎಂದು ಕರೆದರೂ, ಸೂಕ್ಷ್ಮವಾಗಿ ಗಮನಿಸಿದರೆ ಇಡೀ ಸೃಷ್ಟಿಯೇ ಅಸಂಖ್ಯ ರಂಗೋಲಿಗಳು ಮಿಳಿತಗೊಂಡು ರೂಪುಗೊಂಡ ತುದಿಮೊದಲಿರದ ಒಂದು ರಂಗೋಲಿಯಂತೆ ಕಾಣಿಸುತ್ತದೆ. ಆಕಾಶದಲ್ಲಿನ ಅಗಣಿತ ನಕ್ಷತ್ರಮಾಲೆ ಒಂದು ಅಪೂರ್ವ ರಂಗೋಲಿ. ಹಗಲು ಇರುಳುಗಳ ಸಂಧಿಕಾಲದಲ್ಲಿ ಈ ನಕ್ಷತ್ರರಂಗೋಲಿ ಜೀವಗೊಳ್ಳುವುದು. ಚುಕ್ಕಿಚಿತ್ತಾರಕ್ಕೆ ಮರುಳಾಗಿ ಚಂದಿರ ಬೆಳಕು ಚೆಲ್ಲುತ್ತ ತಲೆತೂಗುವನು. ಸೂರ್ಯನದು ಸ್ವಯಂಪ್ರಕಾಶವಷ್ಟೇ. ಇರುಳು ನೇಪಥ್ಯಕ್ಕೆ ಸರಿದು, ಸೂರ್ಯನ ಅಪೂರ್ವ ಪ್ರಭೆ ವಿಕಸನಗೊಂಡಂತೆ ಚುಕ್ಕಿಚಿತ್ತಾರ ಮಬ್ಬಿನ ಮರೆಗೆ ಸೇರುತ್ತದೆ. ಸೂರ್ಯನೂ ಕಲಾವಿದ. ಭೂಮಿಯನ್ನೇ ಅಂಗಳವನ್ನಾಗಿಸಿಕೊಂಡು ಜೀವಂತ ರಂಗೋಲಿಗಳನ್ನು ಸೃಜಿಸುತ್ತಾನೆ. ಕಾಡು ಮೇಡು ಬೆಟ್ಟ ಬಯಲು ಹೊನಲು ಕಡಲು ಮುಗಿಲು ಎಲ್ಲವೂ ಅವನ ಪಾಲಿಗೆ ಚುಕ್ಕಿಗಳೇ. ಆ ಬಿಂದುಗಳನ್ನು ಸೂರ್ಯ ತನ್ನ ಬೆಳಕಿನ ಗೆರೆಗಳ ಮೂಲಕ ಕೂಡಿಸುತ್ತ ಸೃಜಿಸುವ ರಂಗೋಲಿಗಳ ಸನ್ನಿಧಾನದಲ್ಲಿ ಮನುಷ್ಯರು ಮೂಕವಿಸ್ಮಿತರಷ್ಟೇ.

ರಂಗೋಲಿ ಜೀವಂತಿಕೆಯ ಸಂಕೇತ. ನಗರಪ್ರದೇಶಗಳಲ್ಲಿ ರಂಗೋಲಿ ಬಿಡಿಸಲು ಅಂಗಳದ ಕೊರತೆಯಿದ್ದರೂ, ಊರುಕೇರಿಯ ಭಾವಕೋಶದ ನಂಟನ್ನು ನಗರಕ್ಕೂ ಕರೆತಂದು ಸಲಹುತ್ತಿರುವ ಹೆಣ್ಣುಮಕ್ಕಳ ಪಾಲಿಗೆ ರಸ್ತೆಯೇ ಅಂಗಳವಾಗಿ, ರಂಗೋಲಿಗೆ ಕ್ಯಾನ್ವಾಸ್ ಆಗಿ ಪರಿಣಮಿಸಿದೆ. ರಂಗೋಲಿಯ ಹುಡಿ ಸಿಗದೆಹೋದಲ್ಲಿ, ಸೀಮೆಸುಣ್ಣ ಹಾಗೂ ಬಣ್ಣದ ಹುಡಿಗಳು ಇದ್ದೇಇವೆ.

ಅಂಗಳದ ರಂಗೋಲಿಯೇನೋ ಹಾಗೂಹೀಗೂ ಉಳಿದುಕೊಂಡಿದೆ; ಕಾಲಕ್ಕೆ ತಕ್ಕಂತೆ ಸ್ವರೂಪವನ್ನೂ ಬದಲಿಸಿಕೊಂಡಿದೆ. ರಂಗೋಲಿಯ ಹಿಂದಿನ ಆಶಯ ನಮ್ಮ ಬದುಕಿನಿಂದ ದೂರವಾಗುತ್ತಿವೆ. ಮನೆ ಹೊರಗಿನ ರಂಗೋಲಿ ಮನಸ್ಸಿನ ಒಳಗೂ ಮೂಡಬೇಕು ಎನ್ನುವುದನ್ನು ಮರೆಯುತ್ತಿದ್ದೇವೆ. ಪ್ರೀತಿ ಕಾಳಜಿಯ ಬಂಧದಲ್ಲಿ ರೂಪುಗೊಳ್ಳುತ್ತಿದ್ದ ಮನೆಮಂದಿಯ ಸಂಬಂಧವೇ ಚುಕ್ಕಿ–ಗೆರೆಗಳ ರಂಗೋಲಿಯಲ್ಲಿ ಅಭಿವ್ಯಕ್ತಗೊಳ್ಳುತ್ತಿತ್ತು. ರಂಗೋಲಿ ಮಸುಕಾದಂತೆ ಸಂಬಂಧಗಳೂ ಮುಕ್ಕಾಗುತ್ತಿರುವ ದಿನಗಳಿವು. ರಂಗೋಲಿಯ ಹೆಸರಿನಲ್ಲಿ ಬದುಕಿಗೆ ಅಗತ್ಯವಾದ ಅಂತಃಕರಣದ ಸೂತ್ರವೊಂದು ಕಳೆದುಹೋಗುತ್ತಿರುವಂತಿದೆ.

ನಮ್ಮ ಹಿರಿಯರ ಪಾಲಿಗೆ ರಂಗೋಲಿ ಮಾನಸಿಕ ಸೌಂದರ್ಯದ ಸಂಕೇತವಾಗಿತ್ತು. ‘ತೆರೆದಿದೆ ಮನೆ ಓ ಬಾ ಅತಿಥಿ’ (ಕುವೆಂಪು) ಎಂದು ಅತಿಥಿ ಅಭ್ಯಾಗತರನ್ನು ಮನೆಗೆ ಬರಮಾಡಿಕೊಳ್ಳಲು ರಂಗೋಲಿಯೇ ಸ್ವಾಗತಕಾರಿಣಿ. ಕದಗಳೊಂದಿಗೆ ಮನಸ್ಸುಗಳೂ ತೆರೆದಿದ್ದ ಕಾಲಘಟ್ಟದಿಂದ ಮುಚ್ಚಿದ ಬಾಗಿಲುಗಳ ದಿನಗಳಿಗೆ ಬಂದಿದ್ದೇವೆ. ಮುಚ್ಚಿದ ಬಾಗಿಲು ಮುಚ್ಚಿದ ಮನಸ್ಸಿನ ಸಂಕೇತ. ಮನೆ–ಮನದ ಬಾಗಿಲುಗಳು ಮುಚ್ಚಿಕೊಂಡಿವೆಯೆಂದರೆ ರಂಗೋಲಿಗೆ ಅವಕಾಶವೆಲ್ಲಿ?

■ **ಚಂಪಕಮಾಲಾ**

## ಮಾತೇ ಮುತ್ತು

- ಕರ್ನಾಟಕವು ಭಾರತವನ್ನು ಪರಕೀಯರ ಭಯಂಕರ ಕುತ್ತಿನಿಂದ ಮೊಟ್ಟಮೊದಲು ಬದುಕಿಸಿದ ದೇಶ. ಅದಕ್ಕಾಗಿ ಸರ್ವ ಭಾರತವು ಕರ್ನಾಟಕಕ್ಕೆ ಚಿರಋಣಿಯಾಗಿರಬೇಕು.

  — ಆಲೂರು ವೆಂಕಟರಾಯರು

- ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ಬದ್ಧತೆ ಇರಬೇಕು.

  —ಬಿ.ಆರ್. ಅಂಬೇಡ್ಕರ್

- ಅದೃಷ್ಟದ ಮೇಲೆ ಎಂದಿಗೂ ನಂಬಿಕೆ ಇಡಬೇಡಿ. ನೀವು ನಂಬಿಕೆ ಇಡಬೇಕಾದುದು ನಿಮ್ಮ ಕಠಿಣ ಶ್ರಮದ ಮೇಲೆ. ಆಗ ಯಶಸ್ಸು ನಿಮ್ಮದಾಗುತ್ತದೆ.

  —ಎ.ಪಿ.ಜೆ. ಅಬ್ದುಲ್ ಕಲಾಂ

- ದುರಂತ ಸ್ವಾಭಾವಿಕ. ಭಗವಂತನ ಶಾಪವಲ್ಲ, ಶಿಕ್ಷೆಯಲ್ಲ. ಒಳಗಿನ ಒತ್ತಡಗಳ ಪರಸ್ಪರ ತಾಕಲಾಟದಲ್ಲಿ ದುರಂತಗಳ ಹುಟ್ಟು. ದುರಂತ ನಮ್ಮ ಬದುಕಿನ ದಾರಿಯನ್ನು ಬದಲಿಸಿದರೂ ನೆನಪಿನಲ್ಲಿರಲಿ, ಇದು ಬಂದು ಹೋಗುವ ಅತಿಥಿಯಷ್ಟೇ.

  —ಡೆಂಗ್ ಮುಂಗ್ ದಾವೋ

- ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು. ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು?

  —ದ.ರಾ. ಬೇಂದ್ರೆ